

22 ಅಂತರರಾಷ್ಟ್ರೀಯ ಪ್ರಶಸ್ತಿಗಳು. ನನಗೆ ಈ ಗೌರವ ದೊರಕಿಸಿಕೊಟ್ಟವರು ನಿರ್ದೇಶಕರು. ಅವರನ್ನು ಗೌರವದಿಂದ ನೆನೆಯುತ್ತೇನೆ.

★ *ನೀವು ಕನ್ನಡ ಸಿನಿಮಾ ರಂಗಕ್ಕೆ ಪ್ರವೇಶಿಸಿದ್ದರ ಬಗ್ಗೆ ಹೇಳಿ?*

ನಾನು ಕಲಿತದ್ದು ಎಂಜಿನಿಯರಿಂಗ್. ಬಾಗಲಕೋಟೆಯಲ್ಲಿ ನಮ್ಮ ಕುಟುಂಬದ್ದು ಒಂದು ಸಿಮೆಂಟ್ ಪೈಪ್‌ಗಳ ತಯಾರಿಕೆಯ ಫ್ಯಾಕ್ಟರಿ ಇತ್ತು. ಉತ್ತರ ಕರ್ನಾಟಕದ ಹಲವೆಡೆ ನಮ್ಮ ಫ್ಯಾಕ್ಟರಿಗಳನ್ನು ವಿಸ್ತರಿಸುವ ಕೆಲಸದಲ್ಲಿ ತೊಡಗಿದ್ದೆ. 1972 ರಲ್ಲಿ ನಾನು ಬೆಂಗಳೂರಿಗೆ ಬಂದೆ. ಬೆಂಗಳೂರಿನಲ್ಲಿ ಆಗಿನ ವಿಮಾನ ನಿಲ್ದಾಣದ ಬಳಿ ಸಿಮೆಂಟ್ ಪೈಪ್ ತಯಾರಿಯ ಸರ್ಕಾರಿ ಸಂಸ್ಥೆಯೊಂದಕ್ಕೆ ತಾಂತ್ರಿಕ ಸಲಹೆ ನೀಡಲು ನನ್ನನ್ನು ಕರೆಸಿಕೊಂಡಿದ್ದರು. ಬೆಳಿಗ್ಗೆ ನನ್ನ ಕೆಲಸ. ಸಮಯ ಸಿಕ್ಕಿದಾಗ ಅಲ್ಲೇ ಒಂದು ಕ್ಯಾಂಟೀನ್‌ನಲ್ಲಿ ಕಾಫಿ ಕುಡಿಯುತ್ತಿದ್ದೆ. ಒಂದು ದಿನ ಕಾಫಿ ಕುಡಿದು ನನ್ನ ಫಿಯೆಟ್ ಕಾರು ಹತ್ತುತ್ತಿದ್ದಾಗ, ವಿಮಾನ ನಿಲ್ದಾಣದಿಂದ ಹೊರ ಬಂದ ತಮಿಳಿನ ಖ್ಯಾತ ನಟ ಜೆಮಿನಿ ಗಣೇಶನ್, ನಿರ್ದೇಶಕ ಬಾಲಚಂದರ್ ಮತ್ತು ರಾಜಸುಲೋಚನ ಕಾಣಿಸಿದರು. ಅವತ್ತು ಏನೋ ಕಾರಣಕ್ಕೆ ಬೆಂಗಳೂರು ಬಂದ್ ಇತ್ತು. ಅವರಿಗೆ ಹೋಟೆಲ್‌ಗೆ ಹೋಗಲು ಕಾರಿ ಸಿಗಲಿಲ್ಲ. ನನ್ನ ಬಳಿ ಡ್ರಾಪ್ ಕೇಳಿದರು. ನಾನು ಸಂತೋಷದಿಂದ ಒಪ್ಪಿಕೊಂಡೆ. ಅಲ್ಲಿಂದ ಜೆಮಿನಿ ಗಣೇಶನ್ ಅವರ ಗೆಳೆತನ ಬೆಳೆಯಿತು. ತಮಿಳಿನಲ್ಲಿ ಹೀರೊ ಮಾಡ್ತೀನಿ ಅಂದರು. ಒಪ್ಪಿಕೊಂಡು ಅಲ್ಲಿಗೆ ಹೋದೆ. ಮೇ ತಿಂಗಳ ಕೊನೆವರೆಗೆ 'ಸ್ಕೂಲ್‌ಮಾಸ್ಟರ್' ಶೂಟಿಂಗ್ ನಡೆಯಿತು. ಆದರೆ ನನಗೆ ಅಲ್ಲಿನ ಹವೆ ಆಗಿಬರಲಿಲ್ಲ. ಆರೋಗ್ಯ ಕೈಕೊಟ್ಟು ವಾಪಸ್ ಬಂದೆ. ಇಲ್ಲಿನ ನನ್ನ ಫ್ಯಾಕ್ಟರಿ ಕೆಲಸಗಳು ಮುಂದುವರಿದವು.

ಆ ಬಳಿಕ ಬೆಂಗಳೂರಿನ ಕಂಠೀರವ ಸ್ಟುಡಿಯೋದಲ್ಲಿ 'ಮಹಾತ್ಯಾಗ' ಸಿನಿಮಾದ ಶೂಟಿಂಗ್. ನಾನು ಅಲ್ಲಿನ ಕೆಲಸಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದೆ. ಆ ನಿರ್ಮಾಪಕರಿಗೆ ಹಣಕಾಸಿನ ತಾಪತ್ರಯ ಎದುರಾಯಿತು. ನಾನೇ ಫೈನಾನ್ಸ್ ಮಾಡಿದೆ. ಫಿಲಂ ರೋಲ್ ಇಲ್ಲ ಎಂದಾಗ ಮದ್ರಾಸಿಗೆ ನಾನೇ ಹೋಗಿ ಜೆಮಿನಿಯವರನ್ನು ಸಂಪರ್ಕಿಸಿ ಫಿಲಂ ರೋಲ್ ತಂದುಕೊಟ್ಟೆ. ಕೊನೆಗೆ ಸಿನಿಮಾಗೆ ವಿತಕರರು ಸಿಗಲಿಲ್ಲ. ಉತ್ತರ ಕರ್ನಾಟಕದಿಂದ ಆಗ ಯಾರೂ ಚಿತ್ರರಂಗದಲ್ಲಿ ಇಲ್ಲ ಎನ್ನುವುದು ಗಮನಕ್ಕೆ ಬಂತು. ವಿತರಣೆಯ ಕೆಲಸ ಕೈಗೆತ್ತಿಕೊಂಡೆ. ಹೀಗೆ ಚಿತ್ರರಂಗದ ನಂಟು ಬೆಳೆಯುತ್ತಾ ಹೋಯಿತು.

★ *ನೀವೇ ಹೀರೊ ಆಗಿ ಹಲವು ಸಿನಿಮಾಗಳು ಯಶಸ್ಸು ಕಂಡವು?*

ಹೌದು. ಅದು ನನ್ನ ವೃತ್ತಿಜೀವನದ ಉತ್ತುಂಗ ಕಾಲ. ಮಾಂಗಲ್ಯ ಭಾಗ್ಯ ಮತ್ತು ಅನುರಾಗ ಬಂಧನ ಎರಡೂ ಸಿನಿಮಾಗಳು ಹಿಟ್ ಆದವು. ನಟಿ ಮಂಜುಳಾ ಅವರು ದೊಡ್ಡ ಬಜೆಟ್‌ನ ಸಿನಿಮಾವೊಂದನ್ನು ಮಾಡು ಎಂದು ಹುರಿದುಂಬಿಸಿದರು. 'ಅಪರಾಧಿ ನಾನಲ್ಲ' ಸಿನಿಮಾ ಶುರು ಮಾಡಿದೆ. ಸೋಮಶೇಖರ್ ನಿರ್ದೇಶನ. ಅದರಲ್ಲಿ ನಾನು ಹೀರೊ, ಅದೂ ಡಬಲ್ ರೋಲ್. ಶ್ರೀನಾಥ್ ಎರಡನೇ ಹೀರೊ. ನಾನೇ ಪ್ರೊಡ್ಯೂಸರ್ ಮತ್ತು ಡಿಸ್ಟ್ರಿಬ್ಯೂಟರ್. ದೊಡ್ಡ ತಾರಾಗಣ ಇತ್ತು. ಮಂಜುಳಾ, ಪದ್ಮಪ್ರಿಯಾ, ಹೇಮಾ ಚೌಧುರಿ, ಗಂಗಾಧರ್, ದಿನೇಶ್, ಮುಸುರಿಕೃಷ್ಣಮೂರ್ತಿ, ಪ್ರಭಾಕರ್, ತೂಗುದೀಪ ಶ್ರೀನಿವಾಸ್ – ಎಲ್ಲ ಇದ್ದರು. – ಸುಂದರಲಾಲ್ ನಹತಾ ತಗೊಂಡರು. ಶೂಟಿಂಗ್‌ನಲ್ಲಿ ಏನೇನೋ ತಾಪತ್ರಯಗಳನ್ನು ಎದುರಿಸಿದೆ. ಶ್ರೀನಾಥ್ ಮುನಿಸಿಕೊಂಡು 22 ದಿನ ಶೂಟಿಂಗಿಗೇ ಬರಲಿಲ್ಲ. ಕೊನೆಗೂ 3 ವರ್ಷಗಳ ಬಳಿಕ 1983ರಲ್ಲಿ ಆ ಸಿನಿಮಾ ಬಿಡುಗಡೆ ಆದಾಗ ದೊಡ್ಡ ಮಟ್ಟದ ಫ್ಲಾಪ್ ಆಯಿತು. ಆ ಕಾಲದಲ್ಲಿ ಒಟ್ಟು 10 ಲಕ್ಷ ರೂಪಾಯಿ ನಷ್ಟ ಎಂದರೆ ನೀವೇ ಊಹಿಸಿ– ನನ್ನ ಪರಿಸ್ಥಿತಿ ಏನಾಗಿರಬಹುದು.. ಎಂದು.

ಮತ್ತೆ ನನ್ನ ಪಯಣ ಫ್ಯಾಕ್ಟರಿ ಕಡೆಗೆ. ಕೆಲವು ವರ್ಷಗಳ ಕಾಲ ಕಷ್ಟಪಟ್ಟು ದುಡಿದೆ. 1994ರಲ್ಲಿ ಮತ್ತೆ ಫೈನಾನ್ಶಿಯರ್ ಆಗಿ ಗಾಂಧಿನಗರಕ್ಕೆ ಮರಳಿಬಂದೆ. ರವಿಚಂದ್ರನ್, ಶಿವರಾಜ್ ಕುಮಾರ್ ಮುಂತಾದವರ ದೊಡ್ಡ ಸಿನಿಮಾಗಳಿಗೆ ಣ ಹಾಕಿದೆ. ಕರ್ನಾಟಕದಲ್ಲೇ ಮೊದಲ ಔಟ್‌ಡೋರ್ ಯುನಿಟ್ ಮಾಡಿದೆ. ನಿರ್ಮಾಪಕರ ಸಂಘದ ಅಧ್ಯಕ್ಷನಾದೆ. ಸರ್ವಿಸ್ ಟ್ಯಾಕ್ಸ್ ರದ್ದು ಮಾಡುವುದರಲ್ಲಿ ಮಹತ್ವದ ಪಾತ್ರ ವಹಿಸಿದೆ. 'ವಿಶ್ವಾಮಿತ್ರ' ಎಂಬ ಸಿನಿಮಾ ನಾನೇ ಹೀರೊ ಆಗಿ ನಿರ್ಮಿಸಿದಾಗ ಯಾರೂ ಥಿಯೇಟರ್ ನೀಡಲಿಲ್ಲ. ಟೀವಿ ಯಲ್ಲಿ ಸಿನಿಮಾ ರಿಲೀಸ್ ಮಾಡಿದೆ. ಬಳಿಕ ಫಿಲಂ ಚೇಂಬರ್ ಅಧ್ಯಕ್ಷನೂ ಆದೆ.

★ *ಈಗ ಹಿಂತಿರುಗಿ ನೋಡಿದಾಗ ಏನನ್ನಿಸುತ್ತೆ?*

ಸಾಧನೆಗಳ ಬಗ್ಗೆ ತೃಪ್ತಿ ಇದೆ. ನನ್ನನ್ನು ಸಿಮೆಂಟ್‌ಪೈಪ್‌ಗಳ ಉದ್ಯಮರಂಗಕ್ಕೆ ಕರೆತಂದವರು ನನ್ನ ಸೋದರಮಾವ. ಮೊದಲು ಚಿತ್ರರಂಗಕ್ಕೆ ಹೋಗುತ್ತೇನೆ ಎಂದಾಗ ಬೇಡ ಎಂದರು. ನಾನು ಕೇಳಿಲಿಲ್ಲ. ಎರಡು ವರ್ಷ ಅವರು ನನ್ನ ಜತೆ ಮಾತೇ ಆಡಲಿಲ್ಲ. ಈಗ ಸಿನಿಮಾರಂಗದಲ್ಲಿ ನನ್ನ ಸಾಧನೆಯ ಬಗ್ಗೆ ಕುಟುಂಬದ ಎಲ್ಲರಿಗೂ ಮೆಚ್ಚುಗೆ ಇದೆ. ನಮ್ಮಲ್ಲಿ ಅತ್ಯುತ್ತಮ ನಿರ್ದೇಶಕರಿದ್ದಾರೆ. ಅವರಿಗೆ ನಿರ್ಮಾಪಕರಾಗಿ ನಾವು ಪ್ರೋತ್ಸಾಹ ಕೊಡಬೇಕು ಸಾರ್. ಇನ್ನೂ ಅತ್ಯುತ್ತಮ ಸಿನಿಮಾಗಳನ್ನು ಕನ್ನಡ ಚಿತ್ರರಂಗ ಕೊಡಲು ಸಾಧ್ಯವಿದೆ. ಅನನ್ಯ ಕಾಸರವಳ್ಳಿ ಅವರ ಹೊಸ ಸಿನಿಮಾ ನೋಡಿ– ಕೇರಳ ಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡಿತು. ಪನೋರಮಾ ಮತ್ತು ಕೋಲ್ಕತ್ತಾ ಚಿತ್ರೋತ್ಸವಗಳಿಗೂ ಆಯ್ಕೆ ಆಯಿತು. ಮತ್ತೆ ಹೇಳುತ್ತೇನೆ– ಪ್ರಶಸ್ತಿಗಳಿಗೆಂದೇ ಸಿನಿಮಾ ನಿರ್ಮಿಸುತ್ತಿಲ್ಲ, ಆದರೆ ಪ್ರಶಸ್ತಿ ಬಂದರೆ ಅದಕ್ಕಿಂತ ದೊಡ್ಡ ಸಂತೋಷ ಇನ್ನಾವುದಿದೆ ಹೇಳಿ?